**ಪ್ರಧಾನ** ಸಿವಿಲ್ **ನ್ಯಾಯಾಧೀಶರು** ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ

ಸಿ.ಸಿ.ನಂಬರ್‌ಃ 970/18

ಫಿರ್ಯಾದುದಾರರು : ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿ : ರವಿ.ಜೆ.ಎಸ್ ಬಿನ್ ಲೇಟ್ ಸುಬ್ಬಯ್ಯ

## ಆಪಾದನೆ

ಶ್ರೀಮತಿ ದೀಪಾ ಕೆ. ಆರ್. ಬಿ ಎ, ಎಲ್. ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೊಡ್ಡಬಳ್ಳಾಪುರ ಆದ ನಾನು ಈ ಕೆಳಕಂಡಂತೆ ಆಪಾದನೆಯನ್ನು ಮಾಡುತ್ತಿದ್ದೇನೆ.

ದಿನಾಂಕ 03-05-2018 ರಂದು ಸಂಜೆ 06-45 ಗಂಟೆ ಸಮಯದಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬಾಶೆಟ್ಟಿಹಳ್ಳಿಯ ಜನತಾ ಕಾಲೋನಿ ಮುಂಭಾಗದ ದೊಡ್ಡಬಳ್ಳಾಪುರ-ಬೆಂಗಳೂರು ರಸ್ತೆಯಲ್ಲಿ ಆರೋಪಿಯಾದ ನೀವು ಕೆಎ-01-ಎಫ್.ಎ-735 ಬಿಎಂಟಿಸಿ ಬಸ್ಸನ್ನು ಬೆಂಗಳೂರಿನಿಂದ ದೊಡ್ಡಬಳ್ಳಾಪುರ ಕಡೆಗೆ ಮಾನವ ಪ್ರಾಣಕ್ಕೆ ಹಾನಿಯುಂಟು ಮಾಡುವ ರೀತಿಯಲ್ಲಿ ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಯು. ತಿರುವಿನ ಬಳಿ ರಸ್ತೆ ದಾಟಲು ಹೋಗುತ್ತಿದ್ದ ಚಾಸಾ-12 ರವರ ಗಂಡನಾದ ಪ್ರಭಾಕರ ರೆಡ್ಡಿರವರಿಗೆ ಡಿಕ್ಕಿ ಹೊಡೆಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂಃ 279 ನೇದರಡಿ ಶಿಕ್ಷಾರ್ಹ ಅಪರಾಧ ಎಸಗಿದ ಬಗ್ಗೆ ಅಪಾದಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಕೆಎ-01-ಎಫ್.ಎ-735 ಬಿಎಂಟಿಸಿ ಬಸ್ಸನ್ನು ಬೆಂಗಳೂರಿನಿಂದ ದೊಡ್ಡಬಳ್ಳಾಪುರ ಕಡೆಗೆ ಮಾನವ ಪ್ರಾಣಕ್ಕೆ ಹಾನಿಯುಂಟು ಮಾಡುವ ರೀತಿಯಲ್ಲಿ ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಯು. ತಿರುವಿನ ಬಳಿ ರಸ್ತೆ ದಾಟಲು ಹೋಗುತ್ತಿದ್ದ ಚಾಸಾ-12 ರವರ ಗಂಡನಾದ ಪ್ರಭಾಕರ ರೆಡ್ಡಿರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಅವರ ತಲೆಗೆ, ಕಣ್ಣಿನ ಮೇಲೆ, ಬಲಕಣ್ಣಿನ ಮೇಲ್ಭಾಗ ಹಣೆಯ

ಮೇಲೆ ಹಾಗೂ ಎಡಕಿವಿಯಲ್ಲಿ ರಕ್ತ ಬಂದು ಇತರೇ ಕಡೆ ಗಾಯಗಳಾಗಿದ್ದು ಅವರನ್ನು 108 ಅಂಬುಲೆನ್ಸ್ ವಾಹನದಲ್ಲಿ ಕೊಲಂಬಿಯಾ ಅಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್ ಅಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಅದೇ ದಿನ ರಾತ್ರಿ ಸುಮಾರು 09-00 ಗಂಟೆ ಸಮಯದಲ್ಲಿ ಮಾರ್ಗಮಧ್ಯೆ ಮೃತ ಪಟ್ಟ ಕಾರಣ ಭಾರತೀಯ ದಂಡ ಸಂಹಿತೆ ಕಲಂಃ 304(ಎ) ನೇದರಡಿ ಶಿಕ್ಷಾರ್ಹ ಅಪರಾಧ ಎಸಗಿದ ಬಗ್ಗೆ ಅಪಾದಿಸಲಾಗಿದೆ.

ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಅದೇಶಿಸುತ್ತೇನೆ.

1. ಮೇಲ್ಕಂಡ ಎಲ್ಲಾ ಅಪಾದನೆಯನ್ನು ಓದಿ ಹೇಳಿದ್ದು ಅರ್ಥವಾಯಿತೇ ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

ಮೇಲ್ಕಂಡ ಎಲ್ಲಾ ಅಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ದೀಪಾ.ಕೆ.ಅರ್.)

ದಿನಾಂಕಃ 17-08-21

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು ದೊಡ್ಡಬಳ್ಳಾಪುರ

ଅଅ ଓର. 970/18